ಕರ್ನಾಟಕ ವಿಧಾನಸಭೆ

ಮಂಗಳವಾರ **22ನೇ ಜುಲೈ 2008** ರಂದು ಸದನವು
ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಮಧ್ಯಾಹ್ನ 11-10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ **ಜಗದೀಶ ಶೆಟ್ಟರ್**ರವರು ಪೀಠವನ್ನು ಅಲಂಕರಿಸಿದ್ದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯ :

ಲೋಕಸಭೆಯ ಕಲಾಪವನ್ನು ಟಿ. ವಿ. ಮುಖೇನ ವೀಕ್ಷಿಸಲು ವಿಧಾನಸಭೆಯನ್ನು ಮುಂದೂಡುವ ಬಗ್ಗೆ.

11-10AM

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ಇವತ್ತು ಭಾರತ ದೇಶದ ಪಾರ್ಲಿಮೆಂಟ್‌ನಲ್ಲಿ ಮಹತ್ವದ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದೆ. ಅದನ್ನು ನೋಡಲು ಸದನವನ್ನು ಮಂದೂಡಬೇಕಾಗಿತ್ತು, ಬಿಟ್ಟರೆ ನಾವೆಲ್ಲಾ ನೋಡುತ್ತೇವೆ. ಯಾವ ಪಕ್ಷದವರಾಗಿರಲಿ ನೋಡಬೇಕೆಂದು ಎಲ್ಲರಿಗೂ ಆಸೆ ಇದೆ, ನೋಡುವುದು ಬಹಳ ಮಹತ್ವವಿದೆ. Council ಅನ್ನು ಮುಂದೂಡಲಾಗಿದೆ. ಇಲ್ಲಿ ಏತಕ್ಕೆ ಆ ರೀತಿ ಮಾಡಬಾರದು?

ಶ್ರೀ ಅಮರೇಗೌಡ ಬಯ್ಯಾಪುರ್ : ಪ್ರಶ್ನೋತ್ತರ ಮುಗಿದ ಮೇಲೆ ಮುಂದೂಡಬಹುದು.

ಅಧ್ಯಕ್ಷರು : ಈಗ ಸರ್ಕಾರದ ಪರವಾಗಿ ಅದರ ಬಗ್ಗೆ ಏನು ಹೇಳುತ್ತಾರೋ ನೋಡೋಣ, ಗುರುಪಾದಪ್ಪ ನಾಗಮಾರಪಲ್ಲಿಯವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಕೆ. ಎಸ್. ಈಶ್ವರಪ್ಪ (ಇಂಧನ ಸಚಿವರು) : ಅಧ್ಯಕ್ಷರೆ, ಇವತ್ತು ಇಡಿ ದೇಶದ ಗಮನ ಸೆಳೆಯುತ್ತಿದೆ, ಅಲ್ಲಿ ಸಂತಾಪ ಸೂಚನೆ ಸಭೆ ಮಾಡುವಂತಹ ಸ್ಥಿತಿ ಬರುತ್ತದೆನೋ ನಮಗೆ ಗೊತ್ತಿಲ್ಲ. ಆದರೂ ಕೂಡ ಸದನವೇನು ತೀರ್ಮಾನ ಮಾಡುತ್ತದೆಯೋ ಅದಕ್ಕೆ ಸರ್ಕಾರ ಬದ್ಧವಾಗಿದೆ. ಇದರಲ್ಲಿ ಕೆಲವರು ಪ್ರಶ್ನೋತ್ತರ ಮುಗಿದ ಮೇಲೆ ಸದನವನ್ನು ಮುಂದೂಡಬೇಕೆಂದು ಹೇಳುತ್ತಿದ್ದಾರೆ, ತಕ್ಷಣವಾಗಬೇಕೆಂದು ಕಾಂಗ್ರೆಸ್ ಮಿತ್ರರು ಹೇಳುತ್ತಿದ್ದಾರೆ, ಏನು ಸದನ ತೀರ್ಮಾನ ಮಾಡುತ್ತದೆಯೋ ಅದನ್ನು ಗಮನಿಸಿ ತೀರ್ಮಾನ ತೆಗೆದುಕೊಳ್ಳಲು ತಮ್ಮ ತೀರ್ಪಿಗೆ ಬಿಡುತ್ತೇವೆ. ಇದರಲ್ಲಿ ಸರ್ಕಾರದ್ದೇನೂ ಭಿನ್ನಾಭಿಪ್ರಾಯವಿಲ್ಲ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, Council ನಲ್ಲೂ ಕೂಡ Parliament ನಲ್ಲಿ ನಡೆಯುವ ಕಲಾಪಗಳನ್ನು ಟಿ. ವಿ. ಮುಖೇನ ವೀಕ್ಷಣೆ ಮಾಡಬೇಕೆಂದು ಅದನ್ನು ಮುಂದಕ್ಕೆ ಹಾಕಿದ್ದಾರೆ. ಬಹಳಷ್ಟು ಜನ ಸೇರಿದಂತೆ ಉಭಯ ನಾಯಕರು ದೆಹಲಿಗೆ ಹೋಗಿದ್ದಾರೆ. ಬಹುಶಃ ಸಂಸದೀಯ ಚಟುವಟಿಕೆಯಲ್ಲಿ ವಿಧಾನ ಸಭೆಯಾಗಲಿ, Parliament ಆಗಲಿ ಯಾವ ರೀತಿಯಾಗಿ ನಡೆಯುತ್ತದೆ,

ಅವರು ಯಾವ ಧಾಟಿಯಲ್ಲಿ ಮಾತನಾಡುತ್ತಾರೆ, ಅವರು decency, decorum ಅನ್ನು ಹೇಗೆ Maintain ಮಾಡುತ್ತಾರೆಂಬ ಎಲ್ಲಾ ವಿಚಾರಗಳನ್ನು ಈ ಸಂದರ್ಭದಲ್ಲಿ ನೋಡುವುದಕ್ಕೆ ಮತ್ತು ಕಲಿಯುವುದಕ್ಕೂ ಕೂಡ ಬಹಳ ಸಹಾಯವಾಗುತ್ತದೆಂದು ನಾನು ಭಾವಿಸುತ್ತೇನೆ. ಆ ಕಾರಣಕ್ಕೆ ಪ್ರಶ್ನೋತ್ತರ ಮುಗಿದ ಮೇಲೆ ಬಹುಶಃ ಇವತ್ತಿನ ಮಟ್ಟಿಗೆ ಸದನವನ್ನು ಮುಂದೂಡುವ ತೀರ್ಮಾನವನ್ನು ಮಾಡಿದರೆ ಹೆಚ್ಚು ಸಹಾಯಕಾರಿಯಾಗುತ್ತದೆ ಮತ್ತೆ ನಮಗೆಲ್ಲರಿಗೂ ನೋಡಲು ಅವಕಾಶವಾಗುತ್ತದೆ ಎಂಬ ಅಭಿಪ್ರಾಯ ಎಲ್ಲಾ ಶಾಸಕರದು ಆಗಿದೆ. ಬಹುಶಃ ನಾವು treasury bench ನವರು ತಾವೇನು ಅಭಿಪ್ರಾಯಪಡುತ್ತೀರೋ ಅದಕ್ಕೆ ಬದ್ಧರಾಗಿರುತ್ತೇವೆ. ನಮ್ಮ ರಾಮಚಂದ್ರ ಗೌಡರು council ಗೆ ರಜೆ ಕೊಡಿಸಿ ಇಲ್ಲಿಗೆ ಬಂದಿದ್ದಾರೆ.

ಅಧ್ಯಕ್ಷರು : ಅವರು ಅಲ್ಲಿ ಸದನವನ್ನು ಮುಂದೂಡಿ ಇಲ್ಲಿಗೆ ಬಂದಿದ್ದಾರೆ.

ಶ್ರೀ ರಾಮಚಂದ್ರ ಗೌಡ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಇದು ಈಗಾಗಲೆ ಮೇಲ್ಮನೆಯಲ್ಲಿ ಚರ್ಚೆಯಾಯಿತು. ಅಲ್ಲಿ ಇಡೀ ಸದನ ಒಟ್ಟಾಗಿ ಒಂದು ತೀರ್ಮಾನಕ್ಕೆ ಬಂದಿತು. ಈ ದೇಶದ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಮತ್ತೊಂದು ದೇಶದೊಡನೆ ಮಾಡಿಕೊಳ್ಳುವ ಒಪ್ಪಂದದ ಮೇಲೆ ಸರ್ಕಾರದ ಅಳಿವು ಉಳಿವಿನ ಬಗ್ಗೆ ಒಂದು ದೊಡ್ಡ ಮಹತ್ವವಾದ ಚರ್ಚೆ ನಡೆಯುತ್ತಿದೆ. ಈ ಚರ್ಚೆಯಲ್ಲಿ ಅನೇಕ ಪ್ರತಿಭಾವಂತ ಲೋಕಸಭಾ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿ, ಇಡೀ ರಾಷ್ಟ್ರಕ್ಕೆ ಮಾರ್ಗದರ್ಶನವಾಗುವಂತಹ ಚರ್ಚೆ ನಡೆಯುತ್ತಿದೆ. ಆ ಚರ್ಚೆಯಲ್ಲಿ ಕರ್ನಾಟಕದ ಅನೇಕ ಪತ್ರಕರ್ತರೂ ಕೂಡ ಭಾಗವಹಿಸಬೇಕು ಮತ್ತು ಅದನ್ನು ಆಲನೆ ಮಾಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅದೆ ರೀತಿಯಾಗಿ ಪ್ರತಿಪಕ್ಷದವರು ಮತ್ತು ಜನತಾ ದಳ (ಎಸ್) ನ ನಾಯಕರಾದ ನಾಣಯ್ಯನವರು ಸೇರಿದಂತೆ ಎಲ್ಲರೂ ಒಟ್ಟಾಗಿ ಸದನವನ್ನು ಎರಡು ದಿವಸಗಳ ಕಾಲ ಮುಂದೂಡುವುದು ಒಳ್ಳೆಯದಾಗುತ್ತದೆಂಬ ಅಭಿಪ್ರಾಯಪಟ್ಟರು. ಅಲ್ಲಿ ಸರ್ಕಾರ, ನಾವು ಸದನವನ್ನು ನಡೆಸುವುದಕ್ಕೆ ತಯಾರಿದ್ದೇವೆ, ಮುಂದೂಡುವುದಕ್ಕೂ ತಯಾರಿದ್ದೇವೆಂದು ಹೇಳಿದೆ. ಇಲ್ಲಿ ಈಗ ಏನಾಗಿದೆ, ಎಂದರೆ, ಒಂದು ವರ್ಗ, ಪ್ರಶ್ನೋತ್ತರ ಮುಗಿಯಲೆಂದು ಹೇಳಿದ್ದಾರೆ. ಆ ಪ್ರಶ್ನೋತ್ತರ ಮುಗಿದ ಮೇಲೆ ಕೊನೆಗೆ ತಾವೇ ತೀರ್ಮಾನ ಮಾಡಬೇಕಾಗಿರುವುದರಿಂದ ಅದನ್ನು ನಿಮಗೆ ಬಿಡುತ್ತೇನೆ. ನಾವೆಲ್ಲಾ ಅಭಿಪ್ರಾಯವನ್ನು ಮುಂದಿಟ್ಟರೂ ಕೂಡ ಸದನವನ್ನು ಮಂದೂಡುವ ಜವಾಬ್ದಾರಿ ನಿಮ್ಮದಾಗಿರುತ್ತದೆ. ಪ್ರಶ್ನೋತ್ತರವಾದ ಮೇಲೆ ತಾವು ತೀರ್ಮಾನ ತೆಗೆದುಕೊಳ್ಳಬಹುದು. ಸರ್ಕಾರದ ವತಿಯಿಂದ ಪೂರ್ಣವಾದ ಅಧಿಕಾರವನ್ನು ನಿಮಗೆ ಕೊಡುತ್ತೇವೆ. ನೀವು ಏನು ಬೇಕಾದರೂ ತೀರ್ಮಾನ ತೆಗೆದುಕೊಳ್ಳಬಹುದು.

ಒಬ್ಬ ಮಾನ್ಯ ಸದಸ್ಯರು : ಅಧ್ಯಕ್ಷರೆ, question hour ಆದ ಮೇಲೆ ಸದನವನ್ನು ಮುಂದೂಡಿದರೆ ಒಳ್ಳೆಯದು.

ಅಧ್ಯಕ್ಷರು : ಗೌರವಾನ್ವಿತ ಸದಸ್ಯರುಗಳು, ಆಡಳಿತ ಮತ್ತು ವಿರೋಧ ಪಕ್ಷಗಳಿಂದಲೂ, ಇವತ್ತು ಏನು ಲೋಕಸಭೆಯಲ್ಲಿ ಕಲಾಪ ನಡೆಯುತ್ತಿದೆ, ಅದನ್ನು ವೀಕ್ಷಣೆ ಮಾಡಬೇಕೆಂಬ ಉದ್ದೇಶದಿಂದ ಇವತ್ತು

ಸದನದ ಕಲಾಪಗಳಿಗೆ ರಜೆಯನ್ನು ಕೊಡಬೇಕೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ. ಇದರ ಬಗ್ಗೆ ನನ್ನದೇನೂ ಬೇರೆಯದಾದ ಅಭಿಪ್ರಾಯವಿಲ್ಲ. ಪ್ರಶ್ನೋತ್ತರವಾಗಬೇಕೆಂಬುದು ಬಹಳಷ್ಟು ಸದಸ್ಯರ ಅಭಿಪ್ರಾಯವಾಗಿದೆ. ಪ್ರಶ್ನೋತ್ತರಕ್ಕೆ ಅವಕಾಶ ಕೊಡಲೇಬೇಕು. ಒಂದು ಅಂಶವನ್ನು ಈ ಸದಂರ್ಭದಲ್ಲಿ ನಾನು ಹೇಳಬಯಸುವುದೇನೆದಂರೆ, ಮೊನ್ನೆ ಬಿ.ಎ.ಸಿ. ಸಭೆಯಲ್ಲಿ 31ನೇ ತಾರೀಖಿನೊಳಗಾಗಿ, ಈ ಒಂದು budget ಬಗ್ಗೆ ಚರ್ಚೆ ಮತ್ತು ಎಲ್ಲಾ ಇಲಾಖೆಗಳ demands ಗಳನ್ನು ನಾಳೆ ನಾವು ಮಂಡನೆ ಮಾಡುತ್ತೇವೆ. ಹೀಗಾಗಿ ಆ ಬಗ್ಗೆ ಚರ್ಚೆ ಮತ್ತು ಸರ್ಕಾರದ ಉತ್ತರ ಮತ್ತು budget pass ಮಾಡುವುದು ಆಗಬೇಕೆನ್ನುವ ಒಂದು ನಿರ್ಣಯವಾಗಿದೆ. ಇವತ್ತಿನ ದಿವಸ ಕಲಾಪ ನಡೆಯದೆ ಇದ್ದರೆ 8-10 ಸದಸ್ಯರಿಗೆ ಮಾತನಾಡುವ ಅವಕಾಶ ಕಡಿಮೆಯಾಗುತ್ತದೆ. ಹೀಗಾಗಿ ನೀವೆಲ್ಲಾ ಸದಸ್ಯರು ಸಹಕಾರವನ್ನು ಕೊಡುವುದಾದರೆ, ನಾವೇನು 31ನೇ ತಾರೀಖಿನ ಬಗ್ಗೆ ಏನು ನಿರ್ಣಯವನ್ನು ತೆಗೆದುಕೊಂಡಿದ್ದೇವೆ ಅದಕ್ಕೆ ಸಹಕಾರ ಕೊಡುವುದಾದರೆ, ಸದನವನ್ನು ಮಂದೂಡುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ದಯವಿಟ್ಟು ಸಹಕಾರ ಕೊಡಬೇಕು. ಈಗ ಪ್ರಶ್ನೋತ್ತರವಾದ ಮೇಲೆ ಸದನವನ್ನು ಮುಂದೂಡುವುದಕ್ಕೆ ನನ್ನ ಸಹಮತವು ಇದೆ. ಈಗ ಪ್ರಶ್ನೋತ್ತರವನ್ನು ಪ್ರಾರಂಭ ಮಾಡೋಣ. ಮೊದಲನೆ ಪ್ರಶ್ನೆ, ಸಿ. ಎಸ್. ಪುಟ್ಟೇಗೌಡರು ಕೇಳುವುದು, ಮುಖ್ಯಮಂತ್ರಿಗಳ ಪರವಾಗಿ ಮಂತ್ರಿಗಳಾದ ಸಿ. ಎಂ. ಉದಾಸಿಯವರು ಉತ್ತರವನ್ನು ನೀಡುವರು. ಇನ್ನೊಂದು ಅಂಶ, ನಾನು ನಿನ್ನೆಯೂ ಹೇಳಿದ್ದೇನೆ. ಈ ಪ್ರಶ್ನೋತ್ತರ ಅವಧಿ ಒಂದು ತಾಸಿನ ಅವಧಿಯಾಗಿದೆ. ಇದರಲ್ಲಿ ನಮ್ಮ ಸದಸ್ಯರು ನಿರ್ದಿಷ್ಟವಾಗಿ ಆ point ಗೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳುವುದು ಮತ್ತೆ ಪೂರಕವಾದ ಪ್ರಶ್ನೆಯನ್ನು ಅಷ್ಟೇ ಸೀಮಿತವಾಗಿ ಕೇಳುವುದು ಮತ್ತು ಆ ವಿಷಯವನ್ನು ವಿಷಯಾಂತರ ಮಾಡುವುದಾಗಬಾರದು. ಹಾಗೆ ಮಂತ್ರಿಗಳೂ ಕೂಡ ಸ್ಪಷ್ಟವಾಗಿ ಉತ್ತರವನ್ನು ಕೊಡುವುದು. ಬಹಳಷ್ಟು ಭಾಷಣದ ರೀತಿಯಾಗಿ ಉತ್ತರ ಕೊಡುವುದಾಗಬಾರದು. ಆಗ ಸಮಯದ ಉಳಿತಾಯವಾಗುವುದಕ್ಕೆ ಸಾಧ್ಯವಿದೆ. ಒಂದು ತಾಸಿನೊಳಗಾಗಿ ನಾನು ಪ್ರಶ್ನೋತ್ತರವನ್ನು ಮುಗಿಸುತ್ತೇನೆ. ಆ ಬಗ್ಗೆ ನಾಳೆ ಯಾರೂ ತಕರಾರು ಮಾಡುವಂತಹದ್ದಾಗಬಾರದು. ಇದು ಲೋಕಸಭೆಯಲ್ಲೂ ಇದೆ. ಇವತ್ತು ಲೋಕಸಭೆಯ ಕಲಾಪವನ್ನು ವೀಕ್ಷಣೆ ಮಾಡುವುದಕ್ಕೆ ಹೋಗುತ್ತಿದ್ದೀರಿ. ಲೋಕಸಭೆಯಲ್ಲಿ ಒಂದು ತಾಸಿನೊಳಗೆ ಪ್ರಶ್ನೋತ್ತರವಾದ ಮೇಲೆ ಐದೇ question ಇರಲಿ ಆರೇ question ಇರಲಿ stop, ಮುಗಿಯಿತು. ಆ ವ್ಯವಸ್ಥೆಗೆ ನಾವು ಹೊಂದಿಕೊಳ್ಳಬೇಕು.

ಶ್ರೀ ಹೆಚ್. ಸಿ. ಬಾಲಕೃಷ್ಣ : ಸರ್, ಸರ್ಕಾರದಿಂದ ಉತ್ತರ ಸ್ಪಷ್ಟವಾಗಿ ಬಂದರೆ ಒಂದು ತಾಸಿನಲ್ಲೇ ಮುಗಿಸಬಹುದು.

ಅಧ್ಯಕ್ಷರು : ಅದಕ್ಕೆ ನಾನು ನಿಮಗಷ್ಟೆ ಅಲ್ಲ, ಮಂತ್ರಿಗಳಿಗೂ ಸ್ಪಷ್ಟವಾಗಿ ಉತ್ತರವನ್ನು ಕೊಡಬೇಕೆಂದು ಹೇಳುತ್ತಿದ್ದೇನೆ. ಬಹಳ ವಿಷಯಗಳನ್ನು detail ಆಗಿ ಹೇಳುವ ಅವಶ್ಯಕತೆ ಇಲ್ಲ, ಆ ರೀತಿಯಾದ ಸಹಕಾರವನ್ನು ತಾವು ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಹಾಗೂ ನಿನ್ನೆ ನೈಸರ್ಗಿಕ ಕೃಷಿಯ ಬಗ್ಗೆ ಒಂದು ವಿಚಾರ ಸಂಕಿರಣವನ್ನು ಇಟ್ಟಂತಹ ಸಂದರ್ಭದಲ್ಲಿ ಬಹಳಷ್ಟು ಸದಸ್ಯರು ಗೈರುಹಾಜರಾಗಿದ್ದರು. ಹೀಗಾಗಿ ಬಹಳ ಒಳ್ಳೆಯ signal ಹೋಗುವುದಿಲ್ಲ. ಇವತ್ತು ನಾಳೆ ನಾಡಿದ್ದು

ಇನ್ನು ಮೂರು ದಿವಸ ಸುಭಾಷ್ ಪಾಲೇಕರ್ ಅವರ ನೈಸರ್ಗಿಕ ಕೃಷಿ ವಿಚಾರ ಸಂಕಿರಣವನ್ನು ಇಟ್ಟಿದ್ದೇವೆ, ದಯವಿಟ್ಟು ಎಲ್ಲರೂ ಬರಬೇಕು.

ಶ್ರೀ ಹೆಚ್. ಡಿ. ರೇವಣ್ಣ : ಸರ್, ಈಗ ಮುಖ್ಯಮಂತ್ರಿಗಳಿಗೆ ಆ ಬಗ್ಗೆ ಕಾಳಜಿ ಇಲ್ಲದೆ ಹೋದಾಗ ಸದಸ್ಯರಿಗೇನು ಕಾಳಜಿ ಇರುತ್ತದೆ ತಾವು ಹೇಳಿ?

ಅಧ್ಯಕ್ಷರು : ನಿಮಗೂ ರಜೆಯನ್ನು ಕೊಡುತ್ತಿದ್ದೇವೆ.

ಶ್ರೀ ಕೆ. ಎಸ್. ಈಶ್ವರಪ್ಪ : ಮುಖ್ಯಮಂತ್ರಿಗಳು ಎಲ್ಲಿಗೆ ಏತಕ್ಕೆ ಹೋಗಿದ್ದಾರೆಂಬುದು ಸಭಾಧ್ಯಕ್ಷರಿಗೆ ಗೊತ್ತು. ನೀವು ಎಲ್ಲಾ ವಿಚಾರಕ್ಕೂ ಮುಖ್ಯಮಂತ್ರಿಗಳನ್ನು ಈ ರೀತಿ ಟೀಕೆ ಮಾಡುವುದು ಸರಿಯಲ್ಲ.

ಶ್ರೀ ಡಿ. ಎಸ್. ಜೀವರಾಜ್ : ಸರ್, ಮಾನ್ಯ ರೇವಣ್ಣನವರು ಮಂತ್ರಿಯಾಗಿದ್ದಾಗ ನನ್ನ ಕಷ್ಟವೇನೆಂದರೆ ಅವರನ್ನು ಕರೆದುಕೊಂಡು ಬರುವುದಕ್ಕೇ ಆಗಲಿಲ್ಲ. ವಿರೋಧಪಕ್ಷದಲ್ಲಿರುವಾಗ ಒಂದು ದಿವಸವೂ ಅಲ್ಲಾಡದೆ ಕುಳಿತಿದ್ದಾರೆ. ಅದೇ ನನಗೆ ಆಶ್ಚರ್ಯ. ಈಗ ಅವರು ಈ ರೀತಿ ಹೇಳುತ್ತಿದ್ದಾರೆ.

ಶ್ರೀ ಹೆಚ್. ಡಿ. ರೇವಣ್ಣ : ಸರ್, ಜೀವರಾಜುರವರು ಹೇಳಿದರಲ್ಲ ಅದಕ್ಕೋಸ್ಕರ ನಿಮ್ಮನ್ನು ಕಾಯಲು ಇರಲೇ ಬೇಕಲ್ಲ.

2. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಕೆ. ಎ. ಎಸ್. ಅಧಿಕಾರಿಗಳ ಆಸ್ತಿ ವಿವರ ಸಲ್ಲಿಕೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 7 : (88)

ಸದಸ್ಯರ ಹೆಸರು : ಶ್ರೀ ಸಿ. ಎಸ್. ಪುಟ್ಟೇಗೌಡ ವಿಧಾನಸಭಾ ಸದಸ್ಯರು (ಶ್ರವಣ ಬೆಳಗೊಳ)

ಉತ್ತರಿಸುವವರು : ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು)

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ.	ರಾಜ್ಯದಲ್ಲಿರುವ ಕೆಎಎಸ್ ಅಧಿಕಾರಿಗಳ ಹುದ್ದೆಗಳೆಷ್ಟು? (ಹೆಸರು ಹಾಗೂ ಹುದ್ದೆ ಸಹಿತ ಮಾಹಿತಿ ನೀಡುವುದು)	ಕರ್ನಾಟಕ ರಾಜ್ಯದಲ್ಲಿ ಕೆಎಎಸ್ ವೃಂದದ ಒಟ್ಟು 354 ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ವಿವರಗಳನ್ನು ಅನುಬಂಧ -ಎ ರಲ್ಲಿ ನೀಡಲಾಗಿದೆ.
ಆ.	ಈ ಅಧಿಕಾರಿಗಳು ಹುದ್ದೆಗೆ ಸೇರಿದಾಗ ತಮ್ಮ ಹಾಗೂ ಕುಟುಂಬದ ಆಸ್ತಿಯ ವಿವರವನ್ನು ಕರ್ನಾಟಕ ಸೇವಾ	ಸಲ್ಲಿಸುತ್ತಿದ್ದಾರೆ. ಅದಾಗ್ಯೂ ಕೆಲವು ಅವಧಿಗೆ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಗಳನ್ನು ಸಲ್ಲಿಸದೇ ಇರುವ ಅಧಿಕಾರಿಗಳ ವಿವರಗಳನ್ನು ಅನುಬಂಧ-ಬಿನಲ್ಲಿ